# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1787**

ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 23-03-2026

ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯವು ಸುಮಾರು 9,000 ಮೆಗಾವ್ಯಾಟ್ ಗಿಂತ ಹೆಚ್ಚು ಸೌರಶಕ್ತಿ ಮತ್ತು 6,500 ಮೆಗಾವ್ಯಾಟ್‌ಗಳಷ್ಟು ಪವನಶಕ್ತಿ ಸಾಮರ್ಥ್ಯವನ್ನು ಹೊಂದಿದ್ದರೂ ಸಹ ಉತ್ಪಾದನೆಯಲ್ಲಿ ಗಮನರ್ಹವಾಗಿ ಕಡಿಮೆಯಾಗಿದೆ: ಕೆಲವೊಮ್ಮೆ ಕೇವಲ 6,800 ಮೆಗಾವ್ಯಾಟ್ ಸೌರಶಕ್ತಿ ಮತ್ತು 1,000 ಮೆಗಾವ್ಯಾಟ್ ಪವನಶಕ್ತಿಯನ್ನು ಮಾತ್ರ ಬಳಸಲಾಗುತ್ತಿರುವುದು ನಿಜವೇ; ಇದ್ದಲ್ಲಿ, ಇದಕ್ಕೆ ಕಾರಣಗಳೇನು; | ನವೀಕರಿಸಬಹುದಾದ ಇಂಧನ, ವಿಶೇಷವಾಗಿ ಸೌರ ಮತ್ತು ಪವನ ಶಕ್ತಿ, ಹವಾಮಾನ ಪರಿಸ್ಥಿತಿಗಳ ಮೇಲೆ ಹೆಚ್ಚು ಅವಲಂಬಿತವಾಗಿದ್ದು, ಉತ್ಪಾದನೆ ಎಲ್ಲಾ ಕಾಲದಲ್ಲಿಯೂ ಒಂದೇ ಸಮನಾಗಿರುವುದಿಲ್ಲ.<br>ಮಾನ್ಸೂನ್ ಋತುಗಳಲ್ಲಿ ಅಥವಾ ಮೋಡ ಕವಿದ ವಾತಾವರಣದಲ್ಲಿ, ಸೌರಶಕ್ತಿ ಉತ್ಪಾದನೆಯು ಸಾಮರ್ಥ್ಯಕ್ಕಿಂತ ಗಮನಾರ್ಹವಾಗಿ ಕಡಿಮೆಯಾಗಬಹುದು. ಬೇಡಿಕೆ ಮಧ್ಯಮವಾಗಿದ್ದಾಗ ಮಧ್ಯಾಹ್ನದ ಸಮಯದಲ್ಲಿ ಸೌರ ಉತ್ಪಾದನೆಯು ಗರಿಷ್ಠವಾಗಿರುತ್ತದೆ, ಆದರೆ ಸಂಜೆಯ ವೇಳೆಯಲ್ಲಿ ರಾಜ್ಯದ ಗರಿಷ್ಠ ಬೇಡಿಕೆ ಪ್ರಾರಂಭವಾಗುತ್ತಿದ್ದಂತೆಯೇ ಸೌರಶಕ್ತಿ ಕಡಿಮೆ ಇರುತ್ತದೆ.<br>ಪವನ ಶಕ್ತಿಗೆ ಸಂಬಂಧಿಸಿದಂತೆ, ಕೆಲವು ಋತುಗಳಲ್ಲಿ (ಮಾರ್ಚ್/ಏಪ್ರಿಲ್ ನಂತಹ ಮಾಹೆಗಳಲ್ಲಿ) ಗಾಳಿಯ ಲಭ್ಯತೆ ಕಡಿಮೆಯಾಗಬಹುದು, ಇದರಿಂದಾಗಿ ಉತ್ಪಾದನೆಯ ಮಟ್ಟ ಕಡಿಮೆ ಇರುತ್ತದೆ. ಪವನ ಶಕ್ತಿಯು ಹಗಲಿನಲ್ಲಿ ಕಡಿಮೆಯಾಗುತ್ತದೆ ಮತ್ತು ರಾತ್ರಿಯಲ್ಲಿ ಗರಿಷ್ಠ ಮಟ್ಟವನ್ನು ತಲುಪುತ್ತದೆ.<br>Merit order dispatch ನಂತೆ ಸೌರ ಮತ್ತು ಪವನ ಯೋಜನೆಗಳಿಗೆ must run stations ಇದ್ದು, ಗ್ರಿಡ್ ನಿರ್ಬಂಧತೆ ಇಲ್ಲದಿದ್ದಲ್ಲಿ, ಸದರಿ ಯೋಜನೆಗಳಿಂದ ಉತ್ಪಾದನೆಯಾಗುವ ಸಂಪೂರ್ಣ ವಿದ್ಯುತ್ತನ್ನು ಬಳಸಲಾಗುತ್ತಿದೆ. |
| ಆ) | ರಾಜ್ಯದಲ್ಲಿ ಪ್ರತಿ ವರ್ಷ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ವಿದ್ಯುತ್ ಬಳಕೆ ಹೆಚ್ಚಾಗುತ್ತಿದ್ದು, ಲೋಡ್ ಶೆಡ್ಡಿಂಗ್ ತಪ್ಪಿಸಲು ಪ್ರಸ್ತುತ ಸಾಲಿನಲ್ಲಿ ಇಲಾಖೆಯ ಯಾವ ಕ್ರಮಗಳನ್ನು ಕೈಗೊಂಡಿದೆ; | ರಾಜ್ಯದಲ್ಲಿ ಪ್ರಸ್ತುತ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಸಲಾಗುತ್ತಿದೆ. ರಾಜ್ಯದಲ್ಲಿ ಉತ್ಪಾದನೆ ಘಟಕಗಳಿಂದ ಉತ್ಪಾದನೆಯಾಗುವ ನಿಗದಿತ ಶಕ್ತಿಯು ಕಡಿಮೆಯಾದಲ್ಲಿ ಬ್ಯಾಂಕಿಂಗ್ ಸಿಸ್ಟಮ್ ನಲ್ಲಿ / ಮುಕ್ತ ಮಾರುಕಟ್ಟೆಯಲ್ಲಿ ವಿದ್ಯುತ್‌ನ್ನು ಪಡೆದು ಬೇಡಿಕೆಯನ್ನು ಪೂರೈಸಲಾಗುತ್ತಿದೆ.<br>ಮುಂದುವರೆದು, ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆಯನ್ನು ನೀಗಿಸಲು ಎಸ್ಕಾಂಗಳ ಪರವಾಗಿ, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ (ಪಿ.ಸಿ.ಕೆ.ಎಲ್) ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>**1. <u>ಬ್ಯಾಂಕಿಂಗ್ ವ್ಯವಸ್ಥೆಗಳು:</u>**<br>**a) <u>ಉತ್ತರ ಪ್ರದೇಶ (UPPCL):</u>**<br>➢ ಈಗಾಗಲೇ ಹಿಂದಿನ ಮಳೆಗಾಲದಲ್ಲಿ ಲಭ್ಯವಿದ್ದ, ಹೆಚ್ಚುವರಿ ವಿದ್ಯುತ್ತನ್ನು ದಿನಾಂಕ 03.10.2025 ರಿಂದ 18.10.2025 ವರೆಗೆ ಸುಮಾರು 100-300 ಮೆ.ವ್ಯಾ. (17.6 ಎಂ.ಯು, 19:00 to 24:00 Hrs) ನೀಡಿದ್ದು, ದಿನಾಂಕ 01.03.2026 ರಿಂದ 31.03.2026 ವರೆಗೆ 118.09 ಮೆ.ವ್ಯಾ. (@104%, 18.30 MU, 19:00 to 24:00 Hrs) ಪಡೆಯಲಾಗುತ್ತಿದೆ.<br>➢ 100 ರಿಂದ 1300 ಮೆ.ವ್ಯಾ ರಷ್ಟು (morning & evening peak hours) ವಿದ್ಯುತ್ತನ್ನು ದಿನಾಂಕ 03.11.2025 ರಿಂದ 15.05.2026 ರವರೆಗೆ ವಿದ್ಯುತ್ ಪಡೆಯಲಾಗುತ್ತಿದೆ. |

| | | |
|---|---|---|
| | | **b) <u>ಪಂಜಾಬ್ (PSPCL):</u>**<br>➢ ಈಗಾಗಲೇ ಹಿಂದಿನ ಮಳೆಗಾಲದಲ್ಲಿ ಲಭ್ಯವಿದ್ದ ಹೆಚ್ಚುವರಿ ವಿದ್ಯುತ್ತನ್ನು<br>ದಿನಾಂಕ 14.06.2025 ರಿಂದ 30.09.2025 ವರೆಗೆ ಸುಮಾರು 200-450 ಮೆ.ವ್ಯಾ. (856.64 ಎಂ.ಯೂ, RTC) ನೀಡಿದ್ದು,<br>ದಿನಾಂಕ 01.11.2025 ರಿಂದ 15.04.2026 ವರೆಗೆ 50 ರಂದ 445 ಮೆ.ವ್ಯಾ. (@105%, 899.47 MU, RTC) ಪಡೆಯಲಾಗುತ್ತಿದೆ.<br>➢ 100 ರಿಂದ 300 ಮೆ.ವ್ಯಾ (RTC) ರಷ್ಟು ವಿದ್ಯುತ್ತನ್ನು ದಿನಾಂಕ 01.01.2026 ರಿಂದ 10.04.2026 ರವರೆಗೆ ಪಡೆಯಲಾಗುತ್ತಿದೆ.<br><br>**c) ಹರಿಯಾಣ (HPPC):**<br>➢ PCKL, 01.01.2026 ರಿಂದ 15.04.2026 ರವರೆಗಿನ ಅವಧಿಗೆ 100 MW ರಿಂದ 400 MW (RTC) ವರೆಗೆ HPPC ಯೊಂದಿಗೆ ಬ್ಯಾಂಕಿಂಗ್ ಒಪ್ಪಂದವನ್ನು ಮಾಡಿಕೊಂಡಿದೆ.<br><br>**2. <u>ವಿದ್ಯುತ್ ಮಾರುಕಟ್ಟೆ ಬಳಕೆ:</u>**<br>➢ 24.12.2025 ರಿಂದ 31.03.2026 ಮತ್ತು 16.04.2026 ರಿಂದ 30.04.2026 ರವರೆಗೆ 300 ರಿಂದ 700 MW RTC ವರೆಗಿನ ವಿದ್ಯುತ್ತನ್ನು ಮುಂಜಾಗ್ರುತಾ ಕ್ರಮವಾಗಿ ವಿದ್ಯುತ್ ವಿನಿಮಯ ಕೇಂದ್ರುಗಳಿಂದ ಖರೀದಿಸಲಾಗಿದೆ.<br>➢ ಯಾವುದೇ ಅನಿರೀಕ್ಷಿತ ಉತ್ಪಾದನಾ ನಿಲುಗಡೆಗಳು ಅಥವಾ ಬೇಡಿಕೆಯಲ್ಲಿ ಅನಿರೀಕ್ಷಿತ ಏರಿಕೆಗಳನ್ನು ನಿರ್ವಹಿಸಲು ವಿದ್ಯುತ್ ವಿನಿಮಯ ಕೇಂದ್ರದಿಂದ ಅವಶ್ಯಕತೆಗನುಗುಣವಾಗಿ ವಿದ್ಯುತ್ತನ್ನು ಖರೀದಿಸಲಾಗುತ್ತಿದೆ.<br><br>**3. <u>ಶಕ್ತಿ ಯೋಜನೆ:</u>**<br>ಶಕ್ತಿಯೋಜನೆ ಅಡಿಯಲ್ಲಿ ಖರೀದಿಸಿಲಾದ 1000 MW RTC ವಿದ್ಯುತ್ತನ್ನು, ದಿನಾಂಕ 01.04.2026 ರಿಂದ ಪಡೆಯಲಾಗುವುದು. |
| ಇ) | ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಸುಮಾರು 10 ವರ್ಷ ಮೇಲ್ಪಟ್ಟ ಟ್ರಾನ್ಸ್‌ಫಾರ್ಮರ್ ಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳು ಅಪಾಯದ ಮಟ್ಟಕ್ಕೆ ತಲುಪಿದ್ದು, ಇವುಗಳನ್ನು ಬದಲಿಸಲು ಇಲಾಖೆ ಯೋಜಿಸಿದೆಯೇ; ಇದ್ದಲ್ಲಿ, ರಾಜ್ಯದಲ್ಲಿ ಎಷ್ಟು ಟ್ರಾನ್ಸ್‌ಫಾರ್ಮರ್ ಳನ್ನು ಬದಲಿಸಲು ಉದ್ದೇಶಿಸಲಾಗಿದೆ? ಮಾಹಿತಿ ನೀಡುವುದು; | ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಪರಿವರ್ತಕ ಕೇಂದ್ರುಗಳ ನಿರ್ವಹಣೆಯ ಅಭಿಯಾನ ಹಾಗೂ ಪರಿವರ್ತಕಗಳ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಯಾವುದೇ ಪರಿವರ್ತಕಗಳು ಅಪಾಯದ ಸ್ಥಿತಿಯಲ್ಲಿರುವುದಿಲ್ಲ. |

ಸಂಖ್ಯೆ: ಎನರ್ಜಿ 96 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು